# ಸೃಷ್ಟಿ ಮತ್ತು ಕರ್ತ

ಸೃಷ್ಟಿಯ ಮೂಲ ಶೋಧದ ತುಡಿತ ಅತ್ಯಂತ ಪುರಾತನವಾದುದು. ಇಂದು ನಾವು ಅದರ ಬಗ್ಗೆ ಏನು ಮಾತನಾಡಿದರೂ ಹಿಂದಿನವರ ಕಾಣ್ಕೆಯೋ ಅಥವಾ ಅದರ ಮುಂದುವರಿಕೆಯೋ ಆಗಿರುತ್ತದೆ. ಏಕೆಂದರೆ ಸೃಷ್ಟಿಯೆಂಬುದು ಚಿಂತಕರ ಚಿಂತನೆಗೆ ಮುಂಚಿತವಾಗಿಯೇ ಇತ್ತು. ಇದು ವಿವಾದಿತ ಸತ್ಯ. ದೇವರಿಗಿಂತ ಮುಂಚೆ ಸೃಷ್ಟಿ ಇತ್ತು; ದೇವ ಮಾನವರಿಗಿಂತ ಮುಂಚೆ ಸೃಷ್ಟಿ ಇತ್ತು ಎಂಬ ಸತ್ಯವನ್ನು ಆಸ್ತಿಕ ಮನಸ್ಸು ಒಪ್ಪಿಕೊಳ್ಳಲು ಸಿದ್ಧವಾಗಲೇ ಇಲ್ಲ. ಚರಿತ್ರೆಯುದ್ದಕ್ಕೂ ಸೃಷ್ಟಿಗೆ ಕಾರಣವಾದ ಅಸ್ತಿತ್ವದ ಬಗ್ಗೆ ನಿರಾಯಾಸವಾದ ವಾದ ಮಂಡನೆಯಾಗುತ್ತಲೇ ಬಂದಿದೆ. ಈ ವಾದವನ್ನು ಪ್ರಶ್ನಿಸಿದವರನ್ನು ಸಮಾಜ ದ್ರೋಹಿಗಳೆಂದೂ ಧರ್ಮದ್ರೋಹಿಗಳೆಂದೂ ನಾಸ್ತಿಕರೆಂದೂ– ಇಂಥವರಿಂದ ಅಧರ್ಮ ಹೆಚ್ಚುತ್ತಿದೆಯೆಂದು ಹೇಳುತ್ತಲೇ ಬರಲಾಗುತ್ತಿದೆ. ಅನೇಕ ವೇಳೆ ಚರಿತ್ರೆ ಈ ರೀತಿ ಪ್ರಶ್ನಿಸಿದವರನ್ನು, ಸೃಷ್ಟಿಯ ಬಗೆಗಿನ ಯಥಾವಾದವನ್ನು ಅಥವಾ ಇರುವಿಕೆಯನ್ನು ಇದ್ದ ಹಾಗೆ ಮತ್ತು ಇರುವುದೇ ಸತ್ಯವೆಂದು ಹೇಳುವವರನ್ನು ಅತ್ಯಂತ ಕ್ರೂರವಾಗಿ ದಂಡಿಸುತ್ತಲೇ ಬಂದಿದೆ. ಆದರೆ ಕರ್ತನನ್ನು ಪ್ರಶ್ನೆ ಮಾಡುವ ಮನೋಧರ್ಮವನ್ನು ಹತ್ತಿಕ್ಕಲು ಸಾಧ್ಯವಾಗಿಲ್ಲ.

ಜಗತ್ತಿಗೊಬ್ಬ ಸೃಷ್ಟಿಕರ್ತನನ್ನು ಕಲ್ಪಿಸಿಕೊಂಡದ್ದು ಆಸ್ತಿಕ ಮನಸ್ಸು ಕಂಡುಕೊಂಡ ಸರಳ ಪರಿಹಾರ. ಈ ಸಮಸ್ತವನ್ನು ಯಾವನೊ ಒಬ್ಬ ಅಸಾಮಾನ್ಯ ಶಕ್ತಿಯುಳ್ಳ, ಪವಾಡದಂತೆ ಜಂತರ್ ಮಂತರ್ ಮಾಡಬಲ್ಲ ವ್ಯಕ್ತಿ ಸೃಷ್ಟಿಸಿದ ಎಂಬುದು ಮನುಷ್ಯನ ಆಲೋಚನಾ ಚಾಲನೆಗೆ ಒಂದು ಪೂರ್ಣ ವಿರಾಮ ತಂದ ಪರಿಕಲ್ಪನೆ. ಈ ಪರಿಕಲ್ಪನೆಯಿಂದ ಜಗತ್ತು ಸೃಷ್ಟಿಯಾಗಲಿಲ್ಲ. ಅದರ ಬದಲಿ ಸ್ವರ್ಗ–ನರಕಗಳು ಕಲ್ಪಿತಗೊಂಡವು; ಅಲ್ಲಿ ವಾಸ ಮಾಡುತ್ತಿರುವ ಮಾನವರಿಗಿಂತ ಭಿನ್ನವಾದ ಶಕ್ತಿಯುಳ್ಳ ದೇವತೆಗಳು ಸೃಷ್ಟಿಯಾದರು. ಅವರು ಕಲ್ಪಿತ ಅತೀತ ಶಕ್ತಿಯುಳ್ಳವರಾದುದರಿಂದ ಮಾನವರು ಅವರ ಅಧೀನರೆಂದು ತಮಗೆ ತಾವೇ ರೂಪಿಸಿಕೊಂಡರು. ತಾವೇ ನೆಯ್ದ ಬಲೆಯಲ್ಲಿ ತಾವೇ ಬಂಧಿಗಳಾಗಿ, ಅದರಲ್ಲೇ ಒಂದು ಬಗೆಯ ಆನಂದ ಕಂಡುಕೊಂಡರು.

ಈ ಆನಂದವನ್ನು ಮುಂದೆ ಭಕ್ತಿರಸವೆಂದು ಕರೆದು ಮೀಮಾಂಸೆ ಹೆಣೆಯಲಾಯಿತು. ಈ ಭಕ್ತಿಯೆಂಬುದು ಸಂಪೂರ್ಣವಾಗಿ ವ್ಯಕ್ತಿಯಲ್ಲಿರುವ ಶೋಧ ಬುದ್ಧಿಯನ್ನು, ಅನ್ವೇಷಕ ಪ್ರವೃತ್ತಿಯನ್ನು ನಾಶಮಾಡಿ ಕೇವಲ ನಂಬಿಕೆಯ ಮೇಲೆ ನಿಲ್ಲುವಂಥದ್ದು. ಈ ನಂಬಿಕೆಯೇ ಸಮಸ್ತ ಆಸ್ತಿಕ ಸಿದ್ಧಾಂತದ ನೆಲೆಯಾಗಿ ನಿಂತು ಆಳತೊಡಗಿತು. ಈ ಆಸ್ತಿಕ ಸಿದ್ಧಾಂತದ ತಳಹದಿಯ ಮೇಲೆ ಪುರಾಣಗಳು, ಪವಾಡಗಳು ಸೃಷ್ಟಿಯಾಗಿ ದೈವೀಕಲ್ಪನೆ ಮತ್ತಷ್ಟು ಗಟ್ಟಿಯಾಯಿತು. ಈ ಪುರಾಣಗಳ ಆಧಾರದ ಮೇಲೆ ಪ್ರತಿಯೊಂದು ಧಾರ್ಮಿಕ ಸಂಪ್ರದಾಯದ ಜನ ಕಾವ್ಯ–ಕಲೆಗಳನ್ನು ಸೃಷ್ಟಿಸಿದರು. ತಮ್ಮ ದೇವರು ಅಥವಾ ದೇವಮಾನವರು ಇತರೆ ಧಾರ್ಮಿಕ ಸಂಪ್ರದಾಯದ ದೇವರು– ದೇವಮಾನವರಿಗಿಂತ ಶ್ರೇಷ್ಠರೆಂದು ವಾದಿಸಿದರು. ಆ ಮೂಲಕ ಮಾನವ ಮಾನವರಲ್ಲಿ ಅಭಿಪ್ರಾಯ ಭೇದಗಳು ಉಂಟಾದವು. ಈ ಭಿನ್ನ ನಂಬಿಕೆ ಮತ್ತು ವಾದಗಳೇ ಮತ್ತಷ್ಟು ಗಟ್ಟಿಯಾಗಿ ಕನಿಷ್ಠ– ಶ್ರೇಷ್ಠ ಎಂಬ ಅಸಮಾನತೆಯನ್ನುಂಟು ಮಾಡಿದವು. ಜಗತ್ತು ಮಾನವರಿಂದ– ಕೇವಲ ಮಾನವರಿಂದ ಕೂಡಿತ್ತು. ಇಂಥ ಕೇವಲ ಮಾನವರಿಂದ ಕೂಡಿದ್ದ ಜಗತ್ತು, ಈ ಧಾರ್ಮಿಕ ಭಿನ್ನ ನಂಬಿಕೆಗಳ ಕಾರಣದಿಂದಾಗಿ ಇಂದು ಜಗತ್ತು ಒಡೆದು ಅನೇಕ ಪಂಗಡಗಳಾಗಿ ಚದುರಿಹೋಗಿದೆ. ಮಾನವೀಯ ನೆಲೆಯಲ್ಲೇ ಹರಿದಾಡುತ್ತಿದ್ದ ಮನಸ್ಸುಗಳು ಭಿನ್ನ ಧಾರ್ಮಿಕ ನೆಲೆಯಲ್ಲಿ ಬದುಕತೊಡಗಿ, ಶ್ರೇಷ್ಠತೆಯ ಅಹಂಕಾರದಲ್ಲಿ ತೇಲಿ ಮುಳುಗುತ್ತಿವೆ. ತಮ್ಮ ಧಾರ್ಮಿಕ ಸಾಮ್ರಾಜ್ಯವನ್ನು ಎಲ್ಲೆಡೆ ವಿಸ್ತರಿಸಬೇಕೆಂಬ ಭ್ರಮಾಧೀನ ನೆಲೆಯಲ್ಲಿ ಇಂದು ಧಾರ್ಮಿಕ ಮೂಲಭೂತವಾದ ವಿಜೃಂಭಿಸುತ್ತಿದೆ.

ಈ ಅನಾಹುತಕ್ಕೆಲ್ಲ ಕಾರಣವಾದದ್ದು– ಈ ಸೃಷ್ಟಿಯ ಸಮಸ್ತಕ್ಕೆಲ್ಲಕ್ಕೂ ಕಾರಣನಾದ ಕರ್ತನೊಬ್ಬನಿದ್ದಾನೆ ಎಂಬ ನಂಬಿಕೆಯೇ! ಸೃಷ್ಟಿ ತಮಗೆ ತಾನು ಇದೆ; ಅದು ಯಾರೊಬ್ಬರ ಪ್ರೇರಣೆಯಿಂದ ಚಲಿಸುತ್ತಿಲ್ಲ; ವಿಕಾಸಗೊಳ್ಳುತ್ತಿಲ್ಲ. ಪ್ರತಿಯೊಂದು ಸೃಷ್ಟಿ ವಿಚಿತ್ರಕ್ಕೂ ಅದರದೇ ಆದ ಅಂತರ್‌ಚೇತನವಿದೆ. ಅದು ಬೇರೆ ಯಾರೋ ನೀಡಿದ ದೇಣಿಗೆಯಲ್ಲ. ಅದು ಅದರ ವ್ಯಕ್ತಿ ವಿಶಿಷ್ಟ ಗುಣ. ಅದರ ನೆಲೆಯ ಮೇಲೆ ಇತರ ಸೃಷ್ಟಿ ಚೇತನದ ವಿಕಾಸಕ್ಕೆ ಅಡ್ಡಿ ಬರದಂತೆ ಬಾಳಿ ಬದುಕುತ್ತದೆ. ಆ ಮೂಲಕ ಹೊಸತನ್ನು ಕಾಣುತ್ತಾ, ರೂಪಾಂತರಗೊಳ್ಳುತ್ತಾ, ಅರಳುತ್ತಾ ಸಾಗುತ್ತದೆ. ಇದೊಂದು ಸರಳ ಸತ್ಯ. ಅದರಲ್ಲಿ ಚಿಂತನೆಗೆ ಅವಕಾಶವಿದೆ, ಕುತೂಹಲಕ್ಕೆ ಅವಕಾಶವಿದೆ. ತನ್ಮೂಲಕ ಬೆಳಕಿನ ಅವಗಾಹನೆಗೆ ಅವಕಾಶವಿದೆ. ಸೃಷ್ಟಿಯ ನಾಗರೀಕತೆ ಬೆಳೆದು ಬಂದಿರುವುದೇ ಹೀಗೆ!

ಒಂದು ಸತ್ಯವನ್ನು ನಾವು ಅರ್ಥ ಮಾಡಿಕೊಳ್ಳಬೇಕು: ಕರ್ತನ ಪರಿಕಲ್ಪನೆ ಸೃಷ್ಟಿಯ ನಡೆಯನ್ನು ಅಲುಗಾಡಿಸಿಲ್ಲ– ಎಂಬುದನ್ನು.

■ **ಶಿಕಾಕು**

## ಮಾತೇ ಮುತ್ತು

★ ದೇವರೇ ಸ್ನೇಹಿತರಿಂದ ರಕ್ಷಿಸು; ಶತ್ರುಗಳ ವಿಚಾರ ನಾನೇ ನೋಡಿಕೊಳ್ಳುವೆ!

–ಹಂಗೇರಿ ಗಾದೆ

★ ಶರೀರವೇ ಧರ್ಮದ ಮೊದಲ ಸಾಧನ.

–ಕಾಳಿದಾಸ

★ ನನ್ನ ಶರೀರವೇ ನನ್ನ ಸೆರೆಮನೆ; ಹಾಗೆಯೇ ಅದೇ ನನ್ನ ಉದ್ಯಾನವನ; ಅದೇ ನನ್ನ ಅರಮನೆ ಸಹ.

–ಆರ್.ಎಲ್.ಸ್ಟೀವನ್‌ಸನ್

★ ಪ್ರತಿಯೊಬ್ಬನೂ ಶರೀರವೆಂಬ ದೇವಾಲಯದ ದಿವ್ಯ ಶಿಲ್ಪಿ.

–ಎಚ್.ಡಿ.ಥೋರಿಯೋ

★ ನಮ್ಮ ಶರೀರ ಒಂದು ಗಡಿಯಾರದಂತೆ. ಒಮ್ಮೆ ರಿಪೇರಿಯಾದರೆ ಮತ್ತೆ ಸರಿಯಾಗಿ ನಡೆಯುವುದು ಕಷ್ಟ.

–ನೆಪೋಲಿಯನ್ ಬೋನಾಪಾರ್ಟ್

★ ಇಷ್ಟವಿರಲಿ ಇಲ್ಲದಿರಲಿ ಯಾವಾಗ ಮಾಡಬೇಕೋ ಆಗ ಅದನ್ನು ಮಾಡುವ ಶಕ್ತಿಯನ್ನು ಕೊಡುವುದೇ ವಿದ್ಯಾಭ್ಯಾಸದ ಅಮೂಲ್ಯ ಫಲ.

–ಟಿ.ಎಚ್.ಹಕ್ಸಲಿ

★ ನಮ್ಮನ್ನು ನಾವು ಸಮಾಧಾನ ಮಾಡಿಕೊಳ್ಳದಿದ್ದರೆ ಮತ್ತಾರು ಮಾಡಿಯಾರು? ದೇವರು ಬಂದು ಸಮಾಧಾನ ಹೇಳಿದರೂ ನಮ್ಮ ಮನಸ್ಸಿಗೆ ಇಳಿದರಲ್ಲವೇ? ನಮ್ಮ ಮನಸ್ಸು ತಾನೇ ಸಮಾಧಾನವಾಗಬೇಕಾದದ್ದು. ಕೊನೆಗೆ ಯಾರಿಗೆ ಯಾರು? ನಮಗೆ ನಾವೇ!

–ಎ.ಆರ್.ಕೃಷ್ಣಶಾಸ್ತ್ರಿ

★ ರಾಕ್ಷಸ ಶಕ್ತಿ ಹೊಂದಿರುವುದು ಒಳ್ಳೆಯದು; ಅದನ್ನು ರಾಕ್ಷಸನಂತೆ ಉಪಯೋಗಿಸುವುದು ಕೆಟ್ಟದ್ದು.

–ಶೇಕ್ಸ್‌ಪಿಯರ್

★ ನಿಮ್ಮನ್ನು ನೀವೇ ಉದ್ಧರಿಸಿಕೊಳ್ಳಬೇಕು, ದುರ್ಬಲಗೊಳಿಸಿಕೊಳ್ಳಬಾರದು; ನಿಮ್ಮ ಸ್ನೇಹಿತರೂ ನೀವೇ, ನಿಮ್ಮ ಶತ್ರುವೂ ನೀವೇ.

–ಸ್ವಾಮಿ ರಂಗನಾಥಾನಂದ

★ ವಿರೋಧಿಸುವ ರಾಜಕೀಯಕ್ಕಿಂತ ಅಧಿಕಾರ ನಡೆಸುವ ರಾಜಕೀಯ ಕಷ್ಟ.

–ಅಟಲ್ ಬಿಹಾರಿ ವಾಜಪೇಯಿ

★ ಮೇಲು ಜಾತಿಯವರಾದರೆ ಪುರಸ್ಕಾರ, ಕೆಳಜಾತಿಯವರಾದರೆ ತಿರಸ್ಕಾರ– ಎಂದು ನಿರ್ದಿಷ್ಟಪಡಿಸಿರುವ ಶಾಶ್ವತ ಅಧಿಕೃತ ಶ್ರೇಣಿ ಜಗತ್ತಿನ ಯಾವ ಸಮಾಜದಲ್ಲಿಯೂ ಇಲ್ಲ.

–ಬಿ.ಆರ್.ಅಂಬೇಡ್ಕರ್

★ ಸಕಾಲದಲ್ಲಿ ಶಾಂತಿಯ ಬಾಗಿಲು ಹಾಕುತ್ತೇನೆ; ಇಲ್ಲವಾದಲ್ಲಿ ಅದು ಹೊರಟು ಹೋಗಬಹುದು.

–ಓವಿಡ್

★ ದರ್ಜಿಯಂತೆ ಶಾಸನಸಭೆಯ ಸದಸ್ಯರು. ಒಂದು ರಂಧ್ರ ಮುಚ್ಚುವ ವೇಳೆಗೆ ಇನ್ನೊಂದನ್ನು ಮಾಡಿರುತ್ತಾರೆ!

–ಜೋಸೆಫ್ ಕೋವನ್

★ ಭಯದಿಂದ ಸಂಧಾನ ಮಾಡಿಕೊಳ್ಳಬೇಕಿಲ್ಲ. ಸಂಧಾನ ಮಾಡಿಕೊಳ್ಳಲು ಹೆದರಬೇಕಿಲ್ಲ.

–ಜಾನ್ ಎಫ್. ಕೆನಡಿ

★ ನಾವು ಯುದ್ಧ ಮಾಡುವುದು ಶಾಂತಿಯಿಂದ ಇರಬೇಕೆಂದೇ!

–ಅರಿಸ್ಟಾಟಲ್